ಎಷ್ಟೊಂದು ಸುತ್ತುಗಳು! ಅಂದರೆ ಎಷ್ಟೊಂದು ರಕ್ಷಣೆ! ಎಷ್ಟೊಂದು ಗುಟ್ಟು! ಡಿ.ಆರ್. ನಾಗರಾಜ್ ಕಾಫ್ಕಾನ 'ದ ಕ್ಯಾಸಲ್' ಕಾದಂಬರಿಯಲ್ಲಿ ಕೋಟೆ ಅಥವಾ ದುರ್ಗ ಇನ್ನುವುದಕ್ಕೆ ಇರುವ ಹಲವು ಅರ್ಥಗಳನ್ನು ಪಟ್ಟಿ ಮಾಡಿ ಹೇಳಿದ್ದು ನೆನಪಾಯಿತು. 'ಮನುಷ್ಯರು ಸೃಷ್ಟಿಸುವ ನೂರಾರು ಸುತ್ತಿನ ಕೋಟೆಗಳು ಕಣ್ಣಿಗೇ ಕಾಣಲ್ಲ ಕಣಲೇ!' ಎಂದು ಡಿ.ಆರ್. ನಕ್ಕಿದ್ದರು.

ಸರಿ, ಬಿಸಿಲೇರುವ ಮೊದಲು ದೇಸಾಯಿಯನ್ನ ನೋಡೋಣ ಎಂದುಕೊಂಡು ಹುಲಗಪ್ಪ ಮೆಟ್ಟಿಲುಗಳ ಲೆಕ್ಕ ಹಾಕಿದ. ಆವಯ್ಯನ್ನ ನೋಡಲು ಇನ್ನೂ ಇನ್ನೂರು ಮೆಟ್ಟಿಲು ಬಾಕಿ! ಎಷ್ಟು ಸುರಕ್ಷಿತವಾದ ಜಾಗದಲ್ಲಿ ಕುಂತು ಬರೀತಿದಾನೆ ಆಸಾಮಿ! ವಿಚಿತ್ರವೆಂದರೆ, ನನ್ನದೊಂದು ಪುಟ್ಟ ಲೇಖನ ಇಷ್ಟೊಂದು ಸುತ್ತು ಹಾರಿ ಹೋಗಿ ಆವಯ್ಯನ್ನ ಹೆದರಿಸಿದೆಯಲ್ಲ! ಆವಯ್ಯನ್ನ ರಕ್ಷಣೆ ಮಾಡೋಕೆ ತಾಸೀಲ್ದಾರು, ಎಜುಕೇಶನ್ ಮಿನಿಸ್ಟ್ರು, ವೈಸ್ ಚಾನ್ಸಲರು! ಕರ್ನಾಟಕದಲ್ಲಿ ಒಬ್ಬ ರೈಟರಿಗೆ ಇಂಥ ಪ್ರಭಾವ ಇದೆ ಅನ್ನುವುದರ ಅಳವೇ ಹುಲಗಪ್ಪನಿಗಿರಲಿಲ್ಲ. ಹಂಗಾದರೆ ಡಿ.ಆರ್. ಹೇಳಿದಂತೆ ನನ್ನ ರಿಸರ್ಚ್ ಮೆಟೀರಿಯಲ್ ಇಟ್ಕೊಂಡು ನಾನೂ ನಾವೆಲ್ ಬರೀಬೇಕು ಅನ್ನಿಸಿತು; ತಕ್ಷಣ ಮನಸ್ಸಿನಲ್ಲಿ ಒಂದು ಸಾಲು ಮೂಡಿಬಿಟ್ಟಿತು: 'ಸೂರ್ಯೋದಯದ ಹೊಂಬೆಳಕಲ್ಲಿ ಕೋಟೆಯ ತುತ್ತ ತುದಿಯೇರಿ ತ್ರಿಭುವನ ಮಹಿಪಾಲರ್ ಚಕ್ರವರ್ತಿಗಳು ದಿಗ್ಮೂಢರಾಗಿ ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡು ಸಿಂಹದಂತೆ ಶತಪಥ ಹಾಕುತ್ತಿದ್ದರು.'

ಹುಲಗಪ್ಪನಿಗೆ ನಗು ಬಂತು. ಆವರೆಗೆ ಓದಿದ್ದ ಐತಿಹಾಸಿಕ ಕಾದಂಬರಿಗಳ ಹಳಸಲು ವರ್ಣನೆಗಳು ಅದೆಲ್ಲಿ ಒಳಗೇ ಕುಂತಿದ್ದವೋ, ಧಡಕ್ಕನೆ ಹೊರ ಬಂದಿದ್ದವು! ಥತ್! ಇಂಥ ಲಕ್ಷಾಂತರ ಸಾಲುಗಳು ಈಗಾಗಲೇ ಕನ್ನಡದಲ್ಲಿ ಬಂದಿವೆ! ಇನ್ನು ಕಾದಂಬರಿಯಲ್ಲಿ ಮಹಿಪಾಲರ ಚಿತ್ರವನ್ನು ಹೇಗೆ ಕೊಡುವುದು? ಆತನದು ಯುದ್ಧದ ಕಲೆಗಳು ಮುಖದ ತುಂಬ ತುಂಬಿ ವಿಕಾರಗೊಂಡಿದ್ದ ಮುಖ ಎಂಬುದು ಎರಡು ಮೂರು ಶಾಸನಗಳಲ್ಲಿದೆ! ಆದರೆ ಅರಮನೆಯಲ್ಲಿ ತೂಗುಬಿಟ್ಟಿದ್ದ ವರ್ಣಚಿತ್ರದಲ್ಲಿ ಕಿರೀಟಧಾರಿ ಮಹಾರಾಜರ ಕೆನ್ನೆ ಸೇಬಿನಂತೆ ನುಣುಪಾಗಿದೆ! ಕೋಟೆಯ ಮುಂದೆ ಯುದ್ಧ ಸನ್ನದ್ಧ ಭಂಗಿಯ ಶಿಲ್ಪದಲ್ಲಿನ ಅವರ ಮುಖ ಡಾಕ್ಟರ್ ರಾಜ್ ಕುಮಾರ್ ಮುಖದ ಥರ ಖಳೆ ಖಳೆಯಾಗಿ ಕಾಣುತ್ತಿದೆ. ಜನರಿಗೆ ಪರಿಚಿತವಾದ ಚಿತ್ರಗಳು ಹೀಗಿರುವಾಗ, ನಾನು ಶಾಸನಗಳಲ್ಲಿ ಕಾಣಬರುವ ಮಹಿಪಾಲರ ಅಸಲಿ ಮುಖದ ಚಿತ್ರ ಕೊಟ್ಟರೆ ಜನ ನನ್ನ ಸುಮ್ಮನೆ ಬಿಟ್ಟಾರೆ!

ಕಾದಂಬರಿ ವಿಹಾರದಲ್ಲಿದ್ದ ಹುಲಗಪ್ಪನಿಗೆ ನೂರಾರು ಮೆಟ್ಟಲೇರಿ ಪ್ರವಾಸಿ ಬಂಗಲೆಯ ಎದುರು ನಿಂತದ್ದೇ ಗೊತ್ತಾಗಲಿಲ್ಲ. ಹೊರಗೆ ಕ್ಯಾರೇ ಎನ್ನುವವರಿರಲಿಲ್ಲ. ಕಾದಂಬರಿ ಬರವಣಿಗೆಯ ಗುಂಗಿನಲ್ಲಿದ್ದ ಹುಲಗಪ್ಪನ ಮನಸ್ಸಿನಲ್ಲಿ 'ಮಹಾಪ್ರಭುಗಳ ವೀರ ಪಹರೆ ಎತ್ತ ಹೋಯಿತು?' ಎಂಬ ಸಾಲು ತೇಲಿ ಬಂದು ನಗು ಬಂತು. ಥತ್! ಇದನ್ನು ಬ್ರಿಟಿಷರು ಪ್ರವಾಸಿ ಬಂಗಲೆ ಮಾಡಿಕೊಂಡು ಇನ್ನೂರು ವರ್ಷದ ಮೇಲಾಗಿತ್ತು! 'ಬಂಗಲೆಯ ಸುತ್ತ ವೀರಮೌನ ಆವರಿಸಿದೆ' ಎಂಬ ಮತ್ತೊಂದು ಸಾಲು ಮನಸ್ಸಿನಲ್ಲಿ ಮೂಡಿದಾಗ, ಐತಿಹಾಸಿಕ ಕಾದಂಬರಿಕಾರ ದೇಸಾಯಿಯ ಪ್ರಭಾವದಿಂದ ಈ ಥರದ ಕ್ಲೀಷೆಗಳು ಹುಟ್ಟುತ್ತಿರಬಹುದು ಎಂದು ದಿಗಿಲಾಗಿ, ಇವನ ಸಾವಾಸವೇ ಬೇಡ ಎಂದುಕೊಂಡು ಹೆಜ್ಜೆ ಕಿತ್ತು ಹಿಂತಿರುಗಿ ಹೊರಟ.

'ಯಾರು?' ದನಿ ಕೇಳಿ ಬಂತು. ಗಡಸು ದನಿ. ತ್ರಿಭುವನ ಮಹಿಪಾಲರ ದನಿಯಿರಬಹುದೇನೋ ಎಂದು ಹುಲಗಪ್ಪ ಬೆಚ್ಚಿ ಹಿಂತಿರುಗಿ ನೋಡಿದ: 'ಯಾರಪ್ಪಾ? ಏನು ಬೇಕಾಗಿತ್ತು?' ಎನ್ನುತ್ತಾ ಅವರೇ, ಖುದ್ದು ರಾವಬಹದ್ದೂರ್ ದೇಸಾಯಿಯವರೇ, ಹೊರ ಬಾಗಿಲ ತುಂಬ ನಿಂತಿದ್ದರು.

'ಸಾರ್... ನಾನು ರಿಸರ್ಚರ್... ಹುಲಗಪ್ಪ ಗೊಂಡರ್ ಅಂತ...'

'ಓ ನೀವೇನೇನ್ರೀ! ಕಮ್ ಕಮ್! ನೈಸ್ ಟು ಮೀಟ್ ಯು' ಎಂದರು ದೇಸಾಯಿ. ಹುಲಗಪ್ಪ ಪೂರಾ ತಲೆಯೆತ್ತದೆ ಸಂಕೋಚದಿಂದ ನಗುತ್ತಾ ಅವರನ್ನು ಅಳೆದುಕೊಂಡ: ಆರಡಿ ಎತ್ತರದ ಆಳು. ಕೋಮಲವಾದ ಬಿಳಿಯ ಮುಖ. ಗರುಡನ ಕೊಕ್ಕಿನಂಥ ಚೂಪು ಮೂಗು. ಚಿನ್ನದ ಕಟ್ಟಿನ ಕನ್ನಡಕದೊಳಗಿಂದ ಸೀಳುವ ಕಣ್ಣು. ಶುಭ್ರ ಬಿಳಿಯ ಜುಬ್ಬ, ಪೈಜಾಮ. ಯಾವ ಸಭೆಯಲ್ಲಾದರೂ ಗೌರವ ಹುಟ್ಟಿಸುವಂತೆ ಸಾಕಷ್ಟು ಎಚ್ಚರಿಕೆ ವಹಿಸಿ ರೂಢಿಸಿಕೊಂಡಂತಿದ್ದ ವ್ಯಕ್ತಿತ್ವ.